ಕಾಲೇಜು, ಕೆಂಪೇಗೌಡ ಕಾಲೇಜುಗಳಲ್ಲಿ ತಾತ್ಕಾಲಿಕವಾಗಿ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರಿಗೆ ರೆಕಮೆಂಡ್ ಮಾಡಿದ್ದು ಅಂಬೇಡ್ಕರ್ ಮೆಡಿಕಲ್ ಕಾಲೇಜಿಗೆ ಸಂಬಂಧಪಟ್ಟಂತೆ ೫೦ಕ್ಕೆ ಫಿಕ್ಸ್ ಮಾಡಿದ್ದಾರೆ. ರಾಮಯ್ಯ ಮೆಡಿಕಲ್ ಕಾಲೇಜಿಗೆ ಸಂಬಂಧಪಟ್ಟಂತೆ ೧೦೦ಕ್ಕೆ ಫಿಕ್ಸ್ ಮಾಡಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಈ ರೀತಿ ವಿತಕೋಸ್ಕರ ಮಾಡಿದರು ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಉತ್ತರ ಹೇಳಿದಮೇಲೆ ಅವರು ಕ್ಲಾರಿಫಿಕೇಷನ್ ಕೇಳಲಿ. ಇಂಟೇಕ್ ಫಿಕ್ಸ್ ಮಾಡುವವರು ಐ.ಎಂ.ಸಿ. ಅವರು. ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅಂಬೇಡ್ಕರ್ ಮತ್ತು ಕೆಂಪೇಗೌಡ ಮೆಡಿಕಲ್ ಕಾಲೇಜುಗಳಲ್ಲಿ ೫೦ ಮಕ್ಕಳಿಗೆ ಫಿಕ್ಸ್ ಮಾಡಿದ್ದಾರೆ. ಇದರಿಂದ ಇಡೀ ರಾಜ್ಯದಲ್ಲಿ ಕಳೆದ ವರ್ಷಕ್ಕಿಂತ ೨೦೦ ಸೀಟು ಕಡಿಮೆ ಆಯಿತು. ಪಿ.ಜಿ. ಕೋರ್ಸಿಗೆ ಸಂಬಂಧಪಟ್ಟಂತೆ ಯಾವರೀತಿಯಲ್ಲೂ ಸೀಟುಗಳು ಕಡಿಮೆಯಾಗಿಲ್ಲ. ಅಲಾಟ್‌ಮೆಂಟ್ ಮಾಡುವಾಗ ಇನ್ ಸರ್ವಿಸ್ ಕ್ಯಾಂಡಿಡೇಟ್ಸ್‌ಗೆ ಮತ್ತು ಎಂಟ್ರೆನ್ಸ್ ಎಕ್ಸಾಮಿನೇಷನ್‌ನಲ್ಲಿ ಪಾಸಾದೆವರಿಗೆ ನಿಗದಿ ಮಾಡುವಾಗ ಒಂದೆರಡು ಸೀಟುಗಳು ಹೆಚ್ಚುಕಡಿಮೆ ಆಗಿರಬಹುದು. ಅಡ್ಮಿಷನ್ ವಿಚಾರದಲ್ಲಿ ಸೆಪ್ಟೆಂಬರ್ ೭ ಕೊನೆ ದಿನವಾದರೂ ಸಮಯಾವಕಾಶ ಕೊಟ್ಟಿದ್ದಾರೆ. ಇದು ಯೂನಿವರ್ಸಿಟಿಗೆ ಸಂಬಂಧಪಟ್ಟ ವಿಚಾರ.

## ರೈತರ ದಾಖಲೆಗಳನ್ನೊಳಗೊಂಡ ಪಾಸ್ ಬುಕ್ ಕೊಡುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಮುಖ್ಯ ಮಂತ್ರಿಗಳೇ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆ ಪ್ರಕಾರ ರೈತನಿಗೆ ಅವನ ದಾಖಲೆ ಪಾಸ್ ಬುಕ್ ಕೊಡುವ ವಿಚಾರ ಇದುವರೆವಿಗೂ ಕಾರ್ಯರೂಪಕ್ಕೆ ಬಾರದಿರಲು ಕಾರಣವೇನು.

ಆ) ಇದನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ರೈತರ ಭೂಮಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳ ಕ್ರೋಢೀಕೃತ ಕೃಷಿ ಸಾಲ ಪಾಸ್ ಪುಸ್ತಕಗಳನ್ನು ಜಿಲ್ಲಾ ಕೋಡ್ ಸಂಖ್ಯೆ ಹಾಗೂ ಹಸಿರು ಬಣ್ಣದ ರೆಕ್ಜಿನ್ ಹೊದಿಕೆಯೊಂದಿಗೆ ವಿತರಿಸಲು ತೀರ್ಮಾನಿಸಿದೆ. ಈ ಬಗ್ಗೆ ರೆಕ್ಜಿನ್ ಕೊಂಡುಕೊಳ್ಳಲು ತೀರ್ಮಾನವಾಲ್ಲದೇ ಇರುವುದರಿಂದ ತಡವಾಗಿದೆ.

ಆ) ಅತಿ ಶೀಘ್ರವಾಗಿ ವಿತರಿಸಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಇದು ಲಕ್ಷಾಂತರ ರೈತರಿಗೆ ಸಂಬಂಧಪಟ್ಟ ವಿಚಾರ ಪಾಸ್ ಪುಸ್ತಕಗಳ ಬಗ್ಗೆ ಜನತಾ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿದೆ. ಆದರೆ, ಇವತ್ತೂ ಹಸಿರು ಬಣ್ಣದ ರೆಕ್ಜೆಲನ್ ಹೊದಿಕೆಯನ್ನು ಕೊಂಡುಕೊಳ್ಳುವುದರ ಬಗೆ ತೀರ್ಮಾನ ಮಾಡಬೇಕಾಗಿದೆ, ಅದು ತೀರ್ಮಾನವಾಗಿಲ್ಲದೇ ಇರುವುದರಿಂದ ತಡವಾಗಿದೆಯೆಂದು ಹೇಳಿದ್ದಾರೆ ಹಸಿರು ಬಣ್ಣದ ರೆಕ್ಜಿಲನ್ ಇಲ್ಲದೇ ಇದ್ದರೆ, ವೈಟ್ ರ್ಯಾಪರ್ ಹಾಕಿ ಕೊಡಿ. ಇವತ್ತು ರೈತರಿಗೆ ಬೇಕಾದ ಪಿ-ಟಿ ದಾಖಲೆಗಳನ್ನು ಇದರಲ್ಲಿ ನಮೂದಿಸಬೇಕಾಗಿರುವುದರಿಂದ ಇದರ ಅವಶ್ಯಕತೆ ಬಹಳ ಇದೆ. ಸದನ ಮುಂಗಿಯುವುದರೊಳಗೆ ವಿತರಣೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ಸರ್ಕಾರದ ಅವಧಿ ಮುಂಗಿಯುವುದರೊಳಗೆ ಇದನ್ನು ಮಾಡುತ್ತೇವೆ.

ಶ್ರೀ ಎಸ್ ಆರ್. ಬೊಮ್ಮಾಯಿ.—ಈಗಾಗಲೇ ಇದನ್ನು ಪ್ರಾರಂಭ ಮಾಡಿದ್ದೇವೆ. ಪುಸ್ತಕಗಳನ್ನು ಪ್ರಿಂಟ್ ಮಾಡಿಸುವುದೇ ಒಂದೇ ಅಲ್ಲ. ಇದರಲ್ಲಿ ಬಹು ಮುಖ್ಯವಾದ ವಿಚಾರಗಳನ್ನು ಬರೆಯಬೇಕಾಗಿದೆ. ಕೆಲವು ಕಡೆ ಹಂಚಿದ್ದೇವೆ. ಈ ವರ್ಷದ ಗುರಿ ಏನು ಇದೆ ಅದರಂತೆ ಹಂಚುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಕೇವು ಕಡೆ ಕೊಟ್ಟಿದ್ದೇವೆಂದು ಹೇಳಿದ್ದಾರೆ, ಅಲ್ಲಿ ಹಸಿರಂ ಬಣ್ಣದ ರೆಕ್‌ಜಿನ್ ಅಡ್ಡಿಬರಲಿಲ್ಲವೆ ? ಆದಷ್ಟು ಬೇಗ ವಿತರಣೆ ಮಾಡಿ ರೈತರಿಗೆ ಅನುಕೂಲ ಮಾಡಿ ಕೊಡುತ್ತೀರಾ ?

ಶ್ರೀ ಎಸ್.ಆರ್. ಬೊಮ್ಮಾಯಿ.—ಆಯಿತು.

**ಸಿಂಧನೂರು ಕೆ, ಹೊಸಹಳ್ಳಿಯಂಲ್ಲಿ ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿರುವುದು.**

೩೦೬೧.*ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರು ವೀರಕಲ್).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಎ) ರಾಯಚೂರು ಜಿಲ್ಲೆ ಸಿಂಧನೂರು ತಾಲ್ಲೂಕು ಕೆ. ಹೊಸಹಳ್ಳಿಯಲ್ಲಿ ಆರು ಜನ ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಬಿ) ಅಪರಾಧಿಗಳ ಹೆಸರು ಮತ್ತು ಸದರಿ ಮಹಿಳೆಯರನ್ನು ಬೆತ್ತಲೆ ಮೆರವಣಿಗೆ ಮಾಡಲು ಕಾರಣರಾದವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಸಿ) ಇಲ್ಲಿಯವರೆಗೆ ಕ್ರಮ ತೆಗೆದುಕೊಂಡಿರದಿದ್ದರೆ ಸರ್ಕಾರವು ತಕ್ಷಣವೇ ಆರೋಪಿಗಳನ್ನು ಪ್ರಾಸಿಕ್ಯೂಟ್ ಮಾಡಲು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಸ್.ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಎ) ನಾಲ್ವರು ಮಹಿಳೆಯರನ್ನು ಬೆತ್ತಲೆ ಮಾಡಲಾಯಿತೆಂದೂ ಮತ್ತು ಆ ನಾಲ್ಕೂ ಜನರ ಪೈಕಿ ಒಬ್ಬ ಮಹಿಳೆ ತಪ್ಪಿಸಿಕೊಂಡು ಓಡಿ ಹೋದಳೆಂದು ವರದಿಯಾಗಿದೆ.

ಬಿ) ಅಪರಾಧಿಗಳ ಹೆಸರು

| | |
|---|---|
| ೧ | ಮೃತ ನಾಗಪ್ಪನ ಹೆಂಡತಿ ಲಚ್ಚಮವ್ವ |
| ೨ | ದೊಡ್ಡಬಸಪ್ಪನ ಹೆಂಡತಿ ಪಾರತವ್ವ |
| ೩ | ಸಣ್ಣಬಸಪ್ಪನ ಹೆಂಡತಿ ಬಾಲವ್ವ |
| ೪ | ದುರಗಪ್ಪನ ಹೆಂಡತಿ ಲಚ್ಚಮವ್ವ |
| ೫ | ಯಮನಪ್ಪನ ಹೆಂಡತಿ ಬಸವ್ವ |
| ೬ | ಮೃತ ನಾಗಪ್ಪನ ಅತ್ತೆ ದೇವಕಮ್ಮ |
| ೭ | ದೊಡ್ಡಬಸಪ್ಪ ತಂದೆ ಈರತಪ್ಪ ತಳವಾರ್ |
| ೮ | ಸಣ್ಣಬಸಪ್ಪ ತಂದೆ ಈರಪ್ಪ ತಳವಾರ |
| ೯ | ಯಮನಪ್ಪ ತಂದೆ ಅಳ್ಳಪ್ಪತಳವಾರ್ |
| ೧೦ | ದುರಗಪ್ಪ ತಂದೆ ಪಂಪಣ್ಣ ತಳವಾರ್ |
| ೧೧ | ಪಂಪಯ್ಯಸ್ವಾಮಿ ತಂದೆ ಪತ್ರಯ್ಯ |
| ೧೨ | ಈರಪ್ಪ ತಂದೆ ಫಕೀರಪ್ಪ ತಳವಾರ್ |
| ೧೩ | ಕಂಪಲಪ್ಪನ ಹೆಂಡತಿ ನಿಂಗವ್ವ |
| ೧೪ | ಯಮನಪ್ಪನ ಹೆಂಡತಿ ಈರವ್ವ |
| ೧೫ | ಸಿದ್ಧಪ್ಪನ ಮಗ ಕರಿಯಪ್ಪ |
| ೧೬ | ಈರಪ್ಪನ ಮಗ ಫಕೀರ ನಾಯಕ್ |

ಆರೋಪಿಗಳಲ್ಲಿ ೧ ರಿಂದ ೧೦ ಆರೋಪಿಗಳನ್ನು ಬಂಧಿಸಲಾಗಿದೆ. ಇವರಲ್ಲಿ ಆರು ಜನ ಮಹಿಳೆಯರು ನ್ಯಾಯಾಲಯದಲ್ಲಿ ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದಾರೆ. ಉಳಿದ ೫ ಜನ ಗಂಡಸರು ನ್ಯಾಯಾಂಗ ಕಸ್ಟಡಿಯಲ್ಲಿದ್ದಾರೆ. ಉಳಿದವರನ್ನು ದಸ್ತಗಿರಿ ಮಾಡಿ ದೋಷಾರೋಪಣೆ ಸಲ್ಲಿಸಲಾಗುತ್ತಿದೆ.